ಒಂದು ಕನಸು. ಅದನ್ನು ನನಸಾಗಿಸುವುದು ಅವರಿಗೆ ಸಾಧ್ಯವಾಗಿತ್ತು, ಸ್ವಂತದ ಮನೆ. ಅದಕ್ಕಾಗಿ ಅವರು ಹಗಲು ರಾತ್ರಿ ಕಷ್ಟಪಟ್ಟಿದ್ದರು. ಮನೆಯನ್ನು ಎತ್ತಿ ನಿಲ್ಲಿಸಲಾಯಿತು. ಅದಕ್ಕೆ ಹೆಸರು ನೀಡಲಾಯಿತು 'ನಿರ್ಮಲಾ'. ಅವರಿಗೆ ಕಂಡಿತ್ತು, ನಿರ್ಮಲಾಳ ಒಂದು ಕನಸನ್ನಾದರೂ ಪೂರ್ಣಗೊಳಿಸಿದ ಸಮಾಧಾನ ತನಗೆ ದೊರೆಯುವುದೆಂದು. ಆದರೆ ಎಲ್ಲಿ ಅದು? ಎಲ್ಲವೂ ಅದೇ ರೀತಿ ಖಾಲಿಯಾಗಿಯೇ ಉಳಿದಿವೆ. ತುಂಬಿಕೊಂಡಿರುವುದೆಲ್ಲವೂ ಆ ನೆನಪುಗಳೇ.

**Solitariness is unanatural to man's life.** ನಿರ್ಮಲ ಹೋಗಿ ಇಷ್ಟು ವರ್ಷಗಳು ಕಳೆದಿವೆ. ಆದರೂ ಇವತ್ತಿಗೂ ಈ ಏಕಾಂಗಿತನ ರೂಢಿ ಆಗುತ್ತಿಲ್ಲ. ಅವರ ಏಕಾಗ್ರತೆಗೆ ಭಂಗ ಬಾರದ ಹಾಗೆ ಚಾರು ಯಾವಾಗಲೋ ಅಲ್ಲಿಂದ ಎದ್ದು ಹೋಗಿದ್ದಳು.

★★★

ಚಾರುವಿಗೆ ಆಫೀಸಿನಲ್ಲಿ ಯಾರೋ ಮಲ್ಲಿಗೆ ತಂದು ಕೊಟ್ಟಿದ್ದರು. ಹಸಿರು ಎಲೆಯ ಮೇಲೆ ಅರಳಿ ನಿಂತ ಮಲ್ಲಿಗೆ ಹೂ ರಾಶಿ. ಮಲ್ಲಿಗೆಯ ನವಿರು ಪರಿಮಳ ಆಫೀಸಿನೊಳಗೆ ಹರಡಿಕೊಳ್ಳಲಾರಂಭಿಸಿತು. ಒಣ ಫೈಲುಗಳ ಮೇಲೆ, ಹುಚ್ಚರ ಹಾಗೆ ಅರಚಾಡುವ ಫೋನಿನ ಮೇಲೆ. ಕಣಕಣದಲ್ಲಿಯೂ ಆ ಸುಗಂಧದ ಮತ್ತು ಏರಿತು. ಎಲ್ಲರೂ ಊಟದ ಸಮಯದಲ್ಲಿ ಮಲ್ಲಿಗೆ ಮಾಲೆ ಹೆಣೆದು ಕೂದಲಿನಲ್ಲಿ ಮುಡಿದುಕೊಂಡರು. ಚಾರು ಕೂಡ ಮುಡಿದಳು. ಅವಳು ಇದೇ ಮೊದಲ ಬಾರಿ ಮಲ್ಲಿಗೆಯನ್ನು ಮುಡಿದುಕೊಳ್ಳುವುದೇನೂ ಅಲ್ಲ. ಆದರೆ ಇವತ್ತು ಅವಳಿಗೆ ಅದು ಏನೋ ಬೇರೆ ರೀತಿಯದ್ದಾಗಿ ಕಂಡಿತು. ತಿಳಿದೋ ತಿಳಿಯದೆಯೋ ಆ ಸುಗಂಧ ಅವಳ ನರನಾಡಿಗಳಲ್ಲಿ ಪ್ರವೇಶಿಸಿತು. ಆ ಸುಗಂಧದಿಂದ ಒಂದು ವಿಧದ ಅಪರಿಚಿತ ಇಚ್ಛೆ ಅವಳ ಹೃದಯದಲ್ಲಿ ಜಾಗೃತವಾಯಿತು. ಇವತ್ತು ಇದೇಕೆ ಹೀಗೆ ಕಾಣುತ್ತಿದೆ? ಹೀಗೆ ಎಂದರೆ ನಿರ್ದಿಷ್ಟವಾಗಿ ಏನದು? ಅದಕ್ಕೆ ಅವಳಲ್ಲಿ ಉತ್ತರವಿರಲಿಲ್ಲ. ಮನಸ್ಸು ಕೆಲಸದಲ್ಲಿ ತೊಡಗಿಕೊಳ್ಳಲಿಲ್ಲ. ಅವಳು ಅಂಗೈಯಿಂದ ಕಣ್ಣು ಮುಚ್ಚಿಕೊಂಡಳು. ರೆಪ್ಪೆಗಳ ಹಿಂದೆ ನೀಲಿ ನೇರಳೆ ಚೌಕಗಳು, ಷಟ್ಕೋನಗಳು ತಿರುಗಲಾರಂಭಿಸಿದವು. ಅದರಲ್ಲಿ ದಾರಿ ಮಾಡಿಕೊಂಡು ಮಲ್ಲಿಗೆಯ ಸುಗಂಧ ಮತ್ತೆ ಅವಳನ್ನು ಸುತ್ತುವರಿಯಲಾರಂಭಿಸಿತು.

ವಿಚಿತ್ರವಾದ ಒಂದು ಅಸ್ವಸ್ಥತೆ. ಯಾವುದು ಅವಳಿಗೆ ಬೇಡವಾಗಿತ್ತೋ ಅದು ಬೇಕೆನಿಸಿತು. ಕಿತ್ತು ತೆಗೆದು ಬಿಸಾಡಬೇಕೆನಿಸಿದರೂ ಅವಳು ಅದನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಂಡಳು. ಕಣ್ಣಿನ ಮೇಲಿರುವ ಕೈಯನ್ನು ಸರಿಸಿದಳು. ಹುಚ್ಚು! ಅವಳು ತನಗೇ ಹುಚ್ಚು ಎಂದುಕೊಳ್ಳುವ ಪ್ರಯತ್ನ ನಡೆಸಿದಳು. ಈ ಮಲ್ಲಿಗೆ ಎಲ್ಲರನ್ನೂ ಮರಳುಗೊಳಿಸುತ್ತದೆ. ಆದರೆ ಅವಳು ಮಲ್ಲಿಗೆಯನ್ನು ಮುಡಿಯುವುದು ಇದೇ ಮೊದಲ ಬಾರಿ ಏನೂ ಅಲ್ಲವಲ್ಲ. ಅನೇಕ ಬಾರಿ ಅವಳು ಈ ಸುಗಂಧವನ್ನು ತಲೆಗೇರಿಸಿಕೊಂಡಿದ್ದಾಳೆ. ಆದರೆ ಹೀಗೆ ಎಂದೂ ನಡೆದಿಲ್ಲ. ಹಾಗಿದ್ದ ಮೇಲೆ ಇವತ್ತು ಇದು ಹೀಗೇಕೆ? ತಲೆಯಲ್ಲಿ ಅರಳಿ ನಿಂತಿರುವ ಬಿಳಿ ಮಲ್ಲಿಗೆ ಹೂ ಮತ್ತು ಎದೆಯೊಳಗೆ ಗಾಢಾಂಧಕಾರದ ಬಿರುಗಾಳಿಯೊಂದಿಗೆ ಚಾರು ಮನೆಗೆ ಹಿಂತಿರುಗಿದಳು. ಆಫೀಸು ಮುಗಿಯುವ ಮುನ್ನವೇ.

ಇವತ್ತು ಇದು ಹೀಗೆ ಯಾಕೆ ನಡೆಯಿತು ಎನ್ನುವುದು ಅವಳಿಗೆ ತಿಳಿಯುವುದರಲ್ಲಿತ್ತು. ಹೀಗೆ ಯಾವುದೇ ತಿಳಿಯದ ಉತ್ತರ ಅವಳನ್ನು ಕಂಗೆಡಿಸುತ್ತದೆ. ಪ್ರತಿಯೊಂದು ಪ್ರಶ್ನೆಯ ಉತ್ತರವನ್ನು ಹುಡುಕಿ ತೆಗೆಯಲೇಬೇಕು. ಅವಳು ಸರ್ ಮನೆಗೆ ಹೊರಟಳು. ಅವಳಿಗಿಂತ ಮೊದಲೇ ಮಲ್ಲಿಗೆ ಸುಗಂಧ ಅವರ ಮನೆ ಪ್ರವೇಶಿಸಿತು.